# ಕೆನರಾ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಶಿರಸಿ (ಉ.ಕ.)

ದೂರವಾಣಿ ಸಂಖ್ಯೆ : 08384-236304, 236717, 236709 Website: www.kanaradccbank.com

## ಬೇಕಾಗಿದ್ದಾರೆ

(I) ಬ್ಯಾಂಕಿನಲ್ಲಿ ಖಾಲಿಯಿರುವ ಈ ಕೆಳಗಿನ ಹುದ್ದೆಯನ್ನು ತುಂಬಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಕರೆಯಲಾಗಿದೆ.

| ಹುದ್ದೆಯ ಹೆಸರು ಹಾಗೂ ಹುದ್ದೆಗಳ ಸಂಖ್ಯೆ | ಮೀಸಲಾತಿ | ಒಟ್ಟು ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ |
|---|---|---|---|
| (1) ಕಿರಿಯ ಗುಮಾಸ್ತರು/ ಕಿರಿಯ ಮೇಲ್ವಿಚಾರಕರು ಒಟ್ಟು ಹುದ್ದೆಗಳು : 41 | ಸಾಮಾನ್ಯ ಅರ್ಹತೆ | 20 | ಈ ಮೇಲಿನ ಹುದ್ದೆಗಳ ವೇತನ ಶ್ರೇಣಿ ರೂ.27650-650-29600-750-32600-850-36000-950-39800-1100-46400-1250-52650 ಹಾಗೂ ಬ್ಯಾಂಕಿನ ನಿಯಮಾವಳಿಯಂತೆ ಲಭ್ಯವಿರುವ ಭತ್ಯೆಗಳನ್ನೊಳಗೊಂಡಿರುತ್ತದೆ. ಆಯ್ಕೆಯಾದ ಅಭ್ಯರ್ಥಿಗೆ ಒಂದು ವರ್ಷದವರೆಗೆ "ತರಬೇತಿ ಅವಧಿ" ಎಂದು ನಿಗದಿಪಡಿಸಲಾಗಿದೆ. |
| | ಪರಿಶಿಷ್ಟ ಜಾತಿ | 06 | |
| | ಪರಿಶಿಷ್ಟ ಪಂಗಡ | 02 | |
| | ಪ್ರವರ್ಗ: I | 01 | |
| | ಪ್ರವರ್ಗ: II ಎ | 06 | |
| | ಪ್ರವರ್ಗ: II ಬಿ | 01 | |
| | ಪ್ರವರ್ಗ: III ಎ | 03 | |
| | ಪ್ರವರ್ಗ: III ಬಿ | 02 | |
| | ಒಟ್ಟು | 41 | |

**(II) ವಿದ್ಯಾರ್ಹತೆ:**

(1) ಈ ಮೇಲಿನ ಹುದ್ದೆಗೆ ಅಂಗೀಕೃತ ವಿಶ್ವವಿದ್ಯಾಲಯದ ಅಂಗೀಕೃತ ಪದವಿಯಲ್ಲಿ ಕನಿಷ್ಠ ಶೇಕಡಾ 60ರಷ್ಟು ಗುಣಾಂಕ ಪಡೆದ ಪದವೀಧರರು ಮಾತ್ರ ಅರ್ಜಿ ಹಾಕಲು ಅರ್ಹರಾಗುತ್ತಾರೆ.

(2) ಅಭ್ಯರ್ಥಿಗಳು ಕಡ್ಡಾಯವಾಗಿ ಕಂಪ್ಯೂಟರ್ ಆಪರೇಶನ್ ಮತ್ತು ಅಪ್ಲಿಕೇಶನ್ ಜ್ಞಾನ ಹೊಂದಿರಬೇಕು.

(3) ಅಭ್ಯರ್ಥಿಗಳು ಕನ್ನಡ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಓದುವ, ಬರೆಯುವ, ಮಾತನಾಡುವ, ಅರ್ಥಮಾಡಿಕೊಳ್ಳುವ ಜ್ಞಾನ ಹೊಂದಿರಬೇಕು.

**(III) ವಯೋಮಿತಿ :**

ಅಭ್ಯರ್ಥಿಗಳು 18 ವರ್ಷ ವಯಸ್ಸನ್ನು ಮೀರಿರಬೇಕು. ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-Iರಲ್ಲಿಯ ಅಭ್ಯರ್ಥಿಗಳು 40 ವರ್ಷ ಮೀರಿರಬಾರದು. ಇತರ ಹಿಂದುಳಿದ ಜಾತಿ/ಹಿಂದುಳಿದ ವರ್ಗದವರು 38 ವರ್ಷ ಮೀರಿರಬಾರದು ಹಾಗೂ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು 35 ವರ್ಷ ಮೀರಿರಬಾರದು. (ವಯೋಮಿತಿ: ದಿನಾಂಕ: 10-09-2022ಕ್ಕೆ ಇದ್ದಂತೆ)

**(IV) ಅರ್ಜಿ ಫಾರ್ಮ್ ಪಡೆಯುವ ವಿಧಾನ :**

ಬ್ಯಾಂಕಿನ (1) ಹೊಸಮಾರುಕಟ್ಟೆ, ಶಿರಸಿ, (2) ಶಿರಸಿ(ಸಿ.ಪಿ.ಬಝಾರ್), (3) ಕಾರವಾರ, (4) ಅಂಕೋಲಾ, (5) ಕುಮಟಾ, (6) ಹೊನ್ನಾವರ, (7) ಭಟ್ಕಳ, (8) ಸಿದ್ದಾಪುರ, (9) ಯಲ್ಲಾಪುರ, (10) ಮುಂಡಗೋಡ, (11) ಹಳಿಯಾಳ, (12) ದಾಂಡೇಲಿ, (13) ಜಗಲಬೇಟ್ ಶಾಖೆಗಳಲ್ಲಿ ರೂ.50/- + ಜಿ.ಎಸ್.ಟಿ. ರೂ.9/- ನಗದು ಪಾವತಿಸಿ, ಅರ್ಜಿ ಫಾರ್ಮನ್ನು ವೈಯಕ್ತಿಕವಾಗಿ ಪಡೆಯಬಹುದು. ಇಲ್ಲವೇ **"ವ್ಯವಸ್ಥಾಪಕ ನಿರ್ದೇಶಕರು, ಕೆ.ಡಿ.ಸಿ.ಸಿ. ಬ್ಯಾಂಕ್ ಲಿ., ಶಿರಸಿ"** ಇವರ ಹೆಸರಿಗೆ ಶಿರಸಿ ಮೇಲೆ ಬರೆದ ರೂ.50/- + ಜಿ.ಎಸ್.ಟಿ. ರೂ.9/- ಸೇರಿ ರೂ.59/-ರ ಡಿ.ಡಿ. ಹಾಗೂ ರೂ. 10/- ರ ಅಂಚೆ ಚೀಟಿ ಹಚ್ಚಿದ ಸ್ವಂತ ವಿಳಾಸವುಳ್ಳ ಲಕೋಟೆ (11"5" ಅಳತೆಯ) ಯೊಂದಿಗೆ **ಕೆ.ಡಿ.ಸಿ.ಸಿ. ಬ್ಯಾಂಕ್ ಲಿ., ಪ್ರಧಾನ ಕಚೇರಿ, ಎಪ್.ಎಂ.ಯಾರ್ಡ್, ಶಿರಸಿ-581402,** ಉ.ಕ. ಇವರಿಗೆ ಅರ್ಜಿ ಮಾಡಿಕೊಂಡಲ್ಲಿ ಅರ್ಜಿ ಫಾರ್ಮ್ ಪೂರೈಸಲಾಗುವುದು. ಅರ್ಜಿ ಫಾರ್ಮ್ ಪಡೆಯುವ **ಕೊನೆಯ ದಿನಾಂಕ: 08-09-2022 ಸಂಜೆ 4.00 ಘಂಟೆ ಆಗಿರುತ್ತದೆ.** ಅರ್ಜಿಯನ್ನು ಅಭ್ಯರ್ಥಿಯು ಸ್ವತಃ ತಮ್ಮ ಕೈಬರಹದಲ್ಲಿ ಭರಣ ಮಾಡಿ ಕಳಿಸಬೇಕು. ಟೈಪ್ ಹಾಗೂ ಬೇರೆಯವರಿಂದ ತುಂಬಿ ಕಳಿಸಿದಲ್ಲಿ ಪರಿಗಣಿಸಲಾಗುವದಿಲ್ಲ. ಅಂತೆಯೇ ಅಪೂರ್ಣ ಮಾಹಿತಿಯುಳ್ಳ ಅರ್ಜಿ ಹಾಗೂ ಸಹಿ ಇಲ್ಲದ ಅರ್ಜಿ ಪರಿಗಣಿಸಲು ಬರಲಾರದು.

ವಿ.ಸೂ.:- ಬ್ಯಾಂಕು ಪೂರೈಸುವ ಅರ್ಜಿ ಫಾರ್ಮನ್ನು ಮಾತ್ರ ಉಪಯೋಗಿಸತಕ್ಕದ್ದು.

**(V) ಭರ್ತಿ ಮಾಡಿದ ಅರ್ಜಿ ಸಲ್ಲಿಸುವ ವಿಧಾನ:**

ಅರ್ಜಿ ಫಾರ್ಮ್ ಪಡೆದ ನಂತರ ಅರ್ಜಿಯನ್ನು ಸ್ವ-ಹಸ್ತಾಕ್ಷರದಲ್ಲಿ ತುಂಬಿ ದೃಢೀಕರಿಸಿದ ಜಾತಿ/ವರ್ಗ ಪ್ರಮಾಣ ಪತ್ರ ಹಾಗೂ ವಿದ್ಯಾರ್ಹತೆ, ಅನುಭವ ಇತ್ಯಾದಿ ಪ್ರಮಾಣ ಪತ್ರಗಳೊಂದಿಗೆ (ದೃಢೀಕೃತ ಝರಾಕ್ಸ್ ಪ್ರತಿ) ಅಗತ್ಯ ಅರ್ಜಿ ಶುಲ್ಕದ ಬಗ್ಗೆ ಪರಿಶಿಷ್ಟ ಜಾತಿ/ಪಂಗಡ ಹಾಗೂ ಪ್ರವರ್ಗ-1 ರ ಅಭ್ಯರ್ಥಿಗಳು ರೂ.250/- + ಜಿ.ಎಸ್.ಟಿ. ರೂ.45/- ಹಾಗೂ ಇತರ ಹಿಂದುಳಿದ ವರ್ಗ (IIಎ, IIಬಿ, IIIಎ, IIIಬಿ) / ಸಾಮಾನ್ಯ ಅರ್ಹತೆಯವರು ರೂ.500/- + ಜಿ.ಎಸ್.ಟಿ. ರೂ.90/- ನ್ನು ನಮ್ಮ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಚಾಲ್ತಿ ಖಾತೆ ನಂ.122000553848 ಕ್ಕೆ ಜಮಾ ಪಡಿಸಿ, ಚಲನ್‌ನ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ ಅಥವಾ ಸದರ ರಕಂನ್ನು ನೆಫ್ಟ್ (NEFT) ಮೂಲಕ **ಚಾಲ್ತಿ ಖಾತೆ ನಂ.122000553848ಕ್ಕೆ (IFSC: KSCB0016001) ಜಮಾ ಮಾಡಿ, ರಕಂ ಜಮಾ ಮಾಡಿದ ಬಗ್ಗೆ UTR ನಂಬರ್** ಒಳಗೊಂಡ ಮಾಹಿತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ ಮೊಹರಾದ ಲಕೋಟೆಯ (11"5" ಅಳತೆಯ) ಮೇಲೆ **"ಕಿರಿಯ ಗುಮಾಸ್ತ/ಕಿರಿಯ ಮೇಲ್ವಿಚಾರಕ ಹುದ್ದೆಗೆ ಅರ್ಜಿ"** ಎಂದು ಸ್ಪಷ್ಟವಾಗಿ ನಮೂದಿಸಿ ಈ ಕೆಳಗಿನ ವಿಳಾಸಕ್ಕೆ ದಿನಾಂಕ: 10-09-2022 ರ ಸಂಜೆ 5.30 ರೊಳಗೆ ತಲುಪುವಂತೆ ಕಳಿಸಬೇಕು. ಈ ಅವಧಿಯ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**ಅರ್ಜಿ ಕಳಿಸುವ ವಿಳಾಸ : ವ್ಯವಸ್ಥಾಪಕ ನಿರ್ದೇಶಕರು, ಕೆನರಾ ಡಿ.ಸಿ.ಸಿ. ಬ್ಯಾಂಕ್ ಲಿ., ಪ್ರಧಾನ ಕಚೇರಿ, ಹೊಸಮಾರುಕಟ್ಟೆ, ಶಿರಸಿ-581 402 (ಉ.ಕ.)**

**(VI)** ನೇಮಕಾತಿ ಪ್ರಕ್ರಿಯೆಯನ್ನು ಯಾವುದೇ ಸಂದರ್ಭದಲ್ಲಿಯೂ ಯಾವುದೇ ಕಾರಣವನ್ನು ನೀಡದೇ ರದ್ದುಗೊಳಿಸುವ ಅಧಿಕಾರವನ್ನು ಬ್ಯಾಂಕು ಹೊಂದಿರುತ್ತದೆ. ಆ ರೀತಿ ನೇಮಕಾತಿ ಪ್ರಕ್ರಿಯೆಯನ್ನು ರದ್ದುಗೊಳಿಸಿದ ಸಂದರ್ಭದಲ್ಲಿ ಮಾತ್ರ ಅರ್ಜಿದಾರರು ಸಲ್ಲಿಸಿದ ಅರ್ಜಿ ಶುಲ್ಕವನ್ನು ಹಿಂದಿರುಗಿಸಲಾಗುವುದು. ಇನ್ಯಾವುದೇ ಕಾರಣಕ್ಕೂ ಅರ್ಜಿ ಶುಲ್ಕವನ್ನು ಮರಳಿ ನೀಡಲು ಬರಲಾರದು.

**(VII)** ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ನಡೆಸಿ, ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ 1:5 ಅನುಪಾತದಲ್ಲಿ ಮೌಖಿಕ ಸಂದರ್ಶನ ನಡೆಸಿ ಆಯ್ಕೆ ಮಾಡಲಾಗುವುದು. ಲಿಖಿತ ಪರೀಕ್ಷೆಯ ವಿವರ ಹಾಗೂ ನೇಮಕಾತಿಗೆ ಸಂಬಂಧಿಸಿ ಇತರ ಶರ್ತುಗಳನ್ನು ಅರ್ಜಿ ಫಾರ್ಮ್ ಸಂಗಡ ಪೂರೈಸುವ ಮಾರ್ಗದರ್ಶಿಕೆಯಲ್ಲಿ ನೀಡಲಾಗಿದೆ.

ಶಿರಸಿ (ಉ.ಕ.)
ದಿನಾಂಕ: 17-08-2022

ಸಹಿ/- ಸದಸ್ಯ ಕಾರ್ಯದರ್ಶಿ ನೇರ ನೇಮಕಾತಿ ಸಮಿತಿ ಹಾಗೂ
ವ್ಯವಸ್ಥಾಪಕ ನಿರ್ದೇಶಕರು, ಕೆ.ಡಿ.ಸಿ.ಸಿ. ಬ್ಯಾಂಕ್ ಲಿ.,ಶಿರಸಿ (ಉ.ಕ)